# ಶ್ರೀ ವಿಜಯದಾಸರ ಕವಚ

ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ
ದುರಿತ ತರಿದು ಪೊರೆವ ವಿಜಯ ಗುರುಗಳೆಂಬರ ॥ ಪ ॥

ದಾಸರಾಯನಾ ದಯವ ಸೂಸಿ ಪಡೆದನಾ
ದೋಷರಹಿತನಾ ಸಂತೋಷ ಭರಿತನಾ ॥ ೧ ॥

ಜ್ಞಾನವಂತನಾ ಬಲು ನಿಧಾನು ಶಾಂತನಾ
ಮಾನವಂತನ ಮಹ (ಬಹು) ವದಾನ್ಯದಾಂತನಾ ॥ ೨ ॥

ಹರಿಯ ಭಜಿಸುವಾ ನರ ಹರಿಯ ಯಜಿಸುವಾ
ದುರಿತ ತ್ಯಜಿಸುವಾ ಮನಕೆ ಹರುಷ ಸುರಿಸುವಾ ॥ ೩ ॥

ಮೋದಭರಿತನಾ ಪಂಚ ಭೇದವರಿತನಾ
ಸಾಧು ಚರಿತನಾ ಮನವಿಶಾದ ಮರೆತನಾ ॥ ೪ ॥

ಇವರ ನಂಬಿದಾ ಜನಕೆ ಭವವಿದೆಂಬುದೊ
ಹವಣವಾಗದೋ ನಮ್ಮವರ ಮತವಿದೊ ॥ ೫ ॥

ಪಾಪಕೋಟಿಯ ರಾಶಿ ಲೇಪವಾಗದೋ
ತಾಪ ಕಳೆವನೋ ಬಲು ದಯಾಪಯೋನಿಧೀ ॥ ೬ ॥

ಕವನರೂಪದೀ ಹರಿಯ ಸ್ತವನ ಮಾಡಿದಾ
ಭುವನ ಬೇಡಿದಾ ಮಾಧವನ ನೋಡಿದಾ ॥ ೭ ॥

ರಂಗನೆಂದನಾ ಭವವು ಹಿಂಗಿತೆಂದನಾ
ಮಂಗಳಾಂಗನಾ ಅಂತರಂಗವರಿತನಾ ॥ ೮ ॥

ಕಾಶಿನಗರದಲ್ಲಿದ್ದ ವ್ಯಾಸದೇವನಾ–ದಯವ
ಸೂಸಿ ಪಡೆದನಾ ಉಲ್ಲಾಸಭರಿತನಾ ॥ ೯ ॥

ಚಿಂತೆ ಬೇಡಿರೋ ನಿಶ್ಚಿಂತರಾಗಿರೋ
ಶಾಂತ ಗುರುಗಳಾ ಪಾದವಂತು ನಂಬಿರೋ ॥ ೧೦ ॥

ಖೇದವಾಗದೋ ನಿಮಗೆ ಮೋದವಾಹುದೋ
ಆದಿ ದೇವನಾ ಸುಪ್ರಸಾದವಾಹುದೋ ॥ ೧೧ ॥

ಪಾಪ ತಡೆವನೊ ಬಂದ ಪಾಪ ಕಡಿವನೊ
ಶ್ರೀಪತಿಯ ಪಾದ ಸಮೀಪಬಿಡುವನೊ ॥ ೧೨ ॥

ಗಂಗೆ ಮಿಂದರೇ ಮಲವು ಹಿಂಗಿತಲ್ಲದೇ
ರಂಗನೊಲಿಯನೋ ಭಕ್ತರ ಸಂಗ ದೊರಕದೇ ॥ ೧೩ ॥

ವೇದ ಓದಲು ಬರಿದೆ ವಾದಮಾಡಲು
ಹಾನಿಯಾಗದೋ ಬುಧರ ಪಾದ ನಂಬದೇ ॥ ೧೪ ॥

ಲೆಕ್ಕವಿಲ್ಲದಾ ದೇಶ ಸುತ್ತಿ ಬಂದರೂ
ದುಃಖವಲ್ಲದೇ ಲೇಶ ಭಕ್ತಿ ದೊರಕದೂ ॥ ೧೫ ॥

ದಾನ ಮಾಡಲೂ ದಿವ್ಯ ಗಾನ ಪಾಡಲೂ
ಜ್ಞಾನ ದೋರೆಯದೋ ಇವರಧೀನವಾಗದೇ ॥ ೧೬ ॥

ಇಷ್ಟು ಯಾತಕೇ ಕಂಡ ಕಷ್ಟವ್ಯಾತಕೇ
ದಿಟ್ಟ ಗುರುಗಳ ಪಾದಮುಟ್ಟಿ ಭಜಿಸಿರೋ ॥ ೧೭ ॥

ಪೂಜೆ ಮಾಡಲು ಕಂಡ ಗೋಜು ಬೀಳಲೂ
ಬೀಜ ಮಾತಿನ ಫಲ ಸಹಜ ದೊರಕದೂ ॥ ೧೮ ॥

ಸುರರು ಎಲ್ಲರೂ ಇವರ ಕರವ ಪಿಡಿವರೋ
ತರಳರಂದದೀ ಹಿಂದೆ ತಿರುಗುತಿಪ್ಪರೋ ॥ ೧೯ ॥

ಗ್ರಹಗಳೆಲ್ಲವೂ ಇವರ್ಗೆ ಸಹಾಯ ಮಾಡುತಾ
ಅಹೋರಾತ್ರಿಲೀ ಸುಖದ ನಿವಹ ಕೊಡುವವೊ ॥ ೨೦ ॥

ವ್ಯಾಧಿ ಬಾರದೋ ದೇಹ ಬಾಧೆ ತಟ್ಟದೋ
ಆದಿದೇವನಾ ಸುಪ್ರಸಾದವಾಹುದೋ ॥ ೨೧ ॥

ಪತಿತ ಪಾಮರಾ ಮಂದ ಮತಿಯು ನಾ ಬಲೂ
ಸ್ತುತಿಸಲಾಪನೇ ಇವರ ಅತಿಶಯಂಗಳಾ ॥ ೨೨ ॥

ಕರುಣದಿಂದಲಿ ಎಮ್ಮ ಪೊರೆವನಲ್ಲದೇ
ದುರಿತ ಕೋಟಿಯಾ ಬೇಗ ತರಿವ ದಯದಲೀ ॥ ೨೩ ॥

ಮಂದಮತಿಗಳೂ ಇವರ ಚಂದವರಿಯದೇ
ನಿಂದಿಸುವರೋ ಭವದ ಬಂಧ ತಪ್ಪದೋ ॥ ೨೪ ॥

ಇಂದಿರಾಪತೀ ಇವರ ಮುಂದೆ ಕುಣಿವನೋ
ಅಂದ ವಚನವಾ ನಿಜಕ್ಕೆ ತಂದು ಕೋಡುವನೋ ॥ ೨೫ ॥

ಉದಯ ಕಾಲದಿ ಈ ಪದವ ಪಠಿಸಲು
ಮದಡನಾದರೂ ಜ್ಞಾನ ಉದಯವಾಹುದು ॥ ೨೬ ॥

ಸಟೆಯಿದಲ್ಲವೋ ವ್ಯಾಸ ವಿಠಲಬಲ್ಲನೋ
ಪಠಿಸಬಹುದಿದೂ ಕೇಳಿ ಕುಟಿಲರಹಿತರೂ ॥ ೨೭ ॥

(ಶ್ರೀ ಕೃಷ್ಣಾರ್ಪಣಮಸ್ತು)